ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಲೋಕ್ ಅರಾಧೆ

ಶಬಾನಾ ಬಿ.ಎಸ್. -ವಿರುದ್ಧ ಕೇವಿನ್ ಜೋಸೆಫ್ ಸೆಲ್ವದೊರೈ

ರಿಟ್ ಅರ್ಜಿಸಂಖ್ಯೆ: 21735/2019 ಮತ್ತು 22449/2019 (ಜಿಎಮ್- ಎಫ್‌ಸಿ), ದಿನಾಂಕ 26 ನೇ ಆಗಸ್ಟ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಅಲೋಕ್ ಅರಾಧೆ:

ಅರ್ಜಿದಾರರ ಪರ ಮಾನ್ಯ ಶ್ರೀ ರವಿ ಶಂಕರ್ ಎ., ನ್ಯಾಯವಾದಿ ಇವರ ಪರ ಶ್ರೀ ಅಶೋಕ್ ಹಾಲ್ನಹಳ್ಳಿ, ಹಿರಿಯ ನ್ಯಾಯವಾದಿ.

ಶ್ರೀ ಎಮ್. ಯು. ಪೂಣಚ್ಚ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ.

2. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ ಸುನಾವಣೆಗಾಗಿ ಅರ್ಜಿಗಳನ್ನು ಸ್ವೀಕರಿಸಿ, ಅವುಗಳನ್ನು ಅಂತಿಮವಾಗಿ ಆಲಿಸಲಾಯಿತು.

3. ಭಾರತ ಸಂವಿಧಾನದ 227 ನೇ ಅನುಚ್ಛೇದದ ಅಡಿಯಲ್ಲಿನ ಈ ಅರ್ಜಿಗಳಲ್ಲಿ, ಅರ್ಜಿದಾರರು ಕೌಟುಂಬಿಕ ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶದ ತೆರವನ್ನು ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ, ಕೌಟುಂಬಿಕ ನ್ಯಾಯಾಲಯ, ಬೆಂಗಳೂರು ಇವರು ಹೊರಡಿಸಿದದಿನಾಂಕ: 22.04.2019 ರ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ.

4. ಅರ್ಜಿಗಳ ಸಲ್ಲಿಕೆಗೆ ಕಾರಣವಾಗಿ ನೀಡಿರುವ ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ- ದಿನಾಂಕ:19.08.2005 ರಂದು ಪಕ್ಷಕಾರರು ವಿವಾಹವಾಗಿದ್ದಾರೆ.ಪ್ರತ್ಯರ್ಜಿದಾರರು ಸ್ವತಃ ಒಪ್ಪಿಕೊಂಡಿರುವಂತೆ ಹಿಂದಿನ ವಿವಾಹದಿಂದ ಅವರು ಒಂದು ಹೆಣ್ಣು ಮಗುವನ್ನು ಹೊಂದಿದ್ದಾರೆ.ಎರಡನೇ ಮದುವೆಯಿಂದ, ಕ್ರಿಸ್ಟೈನ್ ಝೂರಾ ಹೆಸರಿನ ಹೆಣ್ಣು ಮಗುದಿನಾಂಕ: 14.01.2014 ರಂದು ಜನಿಸಿದೆ.ಅರ್ಜಿದಾರರ ಮೊಕದ್ದಮೆಯೆಂದರೆ,ದಿನಾಂಕ: 03.09.2018 ರಂದು ಪ್ರತ್ಯರ್ಜಿದಾರರು ಶಾಲೆಯಿಂದ ಸದರಿ ಮಗುವನ್ನು ಕರೆದುಕೊಂಡು ಹೋಗಿದ್ದಾರೆ.ತರುವಾಯ, ಅಪ್ರಾಪ್ತ ಹೆಣ್ಣು ಮಗುವಿನ ಮಧ್ಯಂತರ ಅಭಿರಕ್ಷೆಯನ್ನು ಕೋರಿ ಪಾಲಕ ಮತ್ತು ಪ್ರತಿಪಾಲಕರ ಅಧಿನಿಯಮ, 1890 ರ 12 ನೇ ಪ್ರಕರಣದ ಅಡಿಯಲ್ಲಿ ಅವರು ವ್ಯವಹರಣೆಗಳನ್ನು ಪ್ರಾರಂಭಿಸಿದ್ದಾರೆ.ಆ ತರುವಾಯ, ಕೌಟುಂಬಿಕ ನ್ಯಾಯಾಲಯವು ಏಕಪಕ್ಷೀಯ ಆದೇಶದ ಮೂಲಕ, ಅಪ್ರಾಪ್ತ ಹೆಣ್ಣು ಮಗುವಿನ ತಂದೆಯಾಗಿರುವ ಪ್ರತ್ಯರ್ಜಿದಾರರಿಗೆ ಮಧ್ಯಂತರ ಅಭಿರಕ್ಷೆಯನ್ನು ಮಂಜೂರು ಮಾಡಿದೆ.ಆ ತರುವಾಯ, ಮಗುವಿನ ತಾಯಿಯಾದ ಅರ್ಜಿದಾರರು ಮಧ್ಯಂತರ ಆದೇಶವನ್ನು ತೆರವು ಮಾಡಲು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ.ಮೇಲೆ ಹೇಳಿದ ಅರ್ಜಿಯನ್ನು,ದಿನಾಂಕ: 22.04.2019 ರ ಪ್ರಶ್ನಿತ ಆದೇಶದ ಮೂಲಕ ಕೌಟುಂಬಿಕ ನ್ಯಾಯಾಲಯವು ವಿಲೆ ಮಾಡಿದ್ದು, ಅದರ ಮೂಲಕ ಅರ್ಜಿದಾರರಿಗೆ ಹೆಣ್ಣು ಮಗುವಿನ ಅಭಿರಕ್ಷೆಯನ್ನು ನಿರಾಕರಿಸಲಾಗಿದೆ.ಆದಾಗ್ಯೂ, ಅವರಿಗೆ ಭೇಟಿ ಹಕ್ಕುಗಳನ್ನು ಹಾಗೂ ಬೇಸಿಗೆ, ದಸರಾ ಮತ್ತು ಚಳಿಗಾಲದ ರಜಾ ದಿನಗಳ ಅವಧಿಯಲ್ಲಿ ಮಧ್ಯಂತರ ಅಭಿರಕ್ಷೆಯನ್ನು ನೀಡಲಾಗಿದೆ.ಮೇಲೆ ಹೇಳಿದ ವಾಸ್ತವಿಕ ಸಂಗತಿಯ ಹಿನ್ನೆಲೆಯಲ್ಲಿ, ಅರ್ಜಿದಾರರು ಈ ನ್ಯಾಯಾಲಯದ ಮುಂದಿದ್ದಾರೆ.

5. ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಅಧಿನಿಯಮದ 12 ನೇ ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿ, ತಾಯಿ, ಕುಟುಂಬದ ಸದಸ್ಯರು ಮತ್ತು ಪ್ರತ್ಯರ್ಜಿದಾರರ ಪರಿಚಾರಕಿಯು ಹೆಣ್ಣು ಮಗುವಿನ ಕಾಳಜಿ ವಹಿಸಲಾಗುವುದು ಎಂದು ಹೇಳಲಾಗಿದೆ.ಪ್ರತ್ಯರ್ಜಿದಾರರ ತಾಯಿಯು ಚೆನ್ನೈನಲ್ಲಿ ವಾಸಿಸುತ್ತಾರೆ ಮತ್ತು ಪ್ರಶ್ನಿತ ಆದೇಶವನ್ನು ಸಮಸ್ಯಾತ್ಮಕವಾಗಿ ಮತ್ತು ನಿರ್ಲಕ್ಷ್ಯದ ರೀತಿಯಲ್ಲಿ ಹೊರಡಿಸಲಾಗಿದೆ ಎ ಂ ದು ಸ ಹ ನಿವೇದಿಸಿಕೊಳ್ಳಲಾಗಿದೆ.ಮಗುವಿನ ಕ್ಷೇಮಾಭಿವೃದ್ಧಿಯು

ಪರಮೋಚ್ಚ ಪರಿಗಣನೆಯ ವಿಷಯವಾಗಿದೆ ಮತ್ತು ಸಾಮಾನ್ಯವಾಗಿ ಹೆಣ್ಣು ಮಗುವಿನ ಅಭಿರಕ್ಷೆಯನ್ನು, ಒತ್ತಾಯಪೂರ್ವಕ ಸಂದರ್ಭಗಳನ್ನು ನ್ಯಾಯಾಲಯದ ಗಮನಕ್ಕೆ ತರುವವರೆಗೆ ಮತ್ತು ತಂದ ಹೊರತು ತಾಯಿಗೆ ನೀಡಲಾಗುತ್ತದೆ ಎಂದು ಸಹ ನಿವೇದಿಸಿಕೊಳ್ಳಲಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಅಂಥ ಯಾವುದೇ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಮಂಡಿಸಿರುವುದಿಲ್ಲ.ಮೊದಲನೇ ಮದುವೆಯ ಕಾಲದಿಂದ, ತಾಯಿಯೆ ಹೆಣ್ಣು ಮಗುವಿನ ಕಾಳಜಿಯನ್ನು ಅದಾಗಲೇ ವಹಿಸಿಕೊಂಡಿದ್ದರೆಂಬುದರ ಕಡೆ ಸಹ ಗಮನ ಸೆಳೆಯಲಾಗಿದೆ.ತಂದೆಯ ಹಣಕಾಸಿನ ಸಮೃದ್ಧಿ ಮಾತ್ರವೇ ನಿರ್ಣಾಯಕ ಸಂಗತಿಯಾಗುವುದಿಲ್ಲ ಮತ್ತು ಸೂಕ್ತ ಸಂದರ್ಭಗಳಲ್ಲಿ, ಮಗುವಿನ ಶೈಕ್ಷಣಿಕ ವೆಚ್ಚಗಳನ್ನು ಭರಿಸಲು ತಂದೆಗೆ ಮಂಜೂರಾತಿ ನೀಡಬಹುದಾಗಿದೆ ಎಂದು ಸಹ ವಾದಿಸಲಾಗಿದೆ.ಅರ್ಜಿದಾರು ಹೂಡಿಕೆ ಬ್ಯಾಂಕರ್ ಆಗಿದ್ದರು; ಆದರೆ, ಅವರು ತಮ್ಮ ಅಪ್ರಾಪ್ತ ಮಗಳನ್ನು ನೋಡಿಕೊಳ್ಳಲು ತಮಗೆ ಸಾಧ್ಯವಾಗುವಂತಾಗಲು, ತಮ್ಮ ಕೆಲಸವನ್ನು ಬಿಟ್ಟಿದ್ದಾರೆ ಎಂದು ಸಹ ನಿವೇದಿಸಿಕೊಳ್ಳಲಾಗಿದೆ.ಮೇಲೆ ಹೇಳಿದ ನಿವೇದನೆಗಳ ಸಮರ್ಥನೆಯಲ್ಲಿ, ' ಗೌರವ್ ನಾಗ್ಪಾಲ್ –ವಿರುದ್ಧ ಸುಮೇಧಾ ನಾಗ್ಪಾಲ್-(2009) 1 ಎಸ್ಸಿಸಿ 42, ವಿವೇಕ್ ಸಿಂಗ್ -ವಿರುದ್ಧ ರೊಮಾನಿ ಸಿಂಗ್ - (2017) 3 ಎಸ್ಸಿಸಿ 231 ಮತ್ತು ' ನಿತ್ಯಾ ಆನಂದ್ ರಾಘವನ್ -ವಿರುದ್ಧ ರಾಜ್ಯ (ದೆಹಲಿಯ ಎನ್ಸಿಟಿ) ಮತ್ತು ಇನ್ನೊಬ್ಬರು - (2017) 8 ಎಸ್ಸಿಸಿ 452 ಈ ಮೊಕದ್ದಮೆಗಳಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳನ್ನು ಅವಲಂಬಿಸಲಾಗಿದೆ.

6. ಇನ್ನೊಂದೆಡೆ, ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಆದೇಶವು ಕಾನೂನಿನ ನ್ಯಾಯಸಮ್ಮತ ತತ್ವಗಳನ್ನಾಧರಿಸಿದೆ ಮತ್ತು ಮಗುವಿನ ಕ್ಷೇಮಾಭಿವೃದ್ಧಿಯನ್ನು ಪರಿಗಣನೆಗೆ ತೆಗೆದುಕೊಂಡು ಹೊರಡಿಸಲಾಗಿದೆ ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಅರ್ಜಿದಾರರಿಗೆ ರಜಾ ಅವಧಿಯಲ್ಲಿ ಮಧ್ಯಂತರ ಅಭಿರಕ್ಷೆಯನ್ನು ಮತ್ತು ಭೇಟಿ ಹಕ್ಕುಗಳನ್ನು ನೀಡಿರುವುದರಿಂದ, ಆಕೆಯ ಹಕ್ಕುಗಳನ್ನು ಸಂರಕ್ಷಿಸಲಾಗಿದೆ ಎಂದು ಸಹ ವಾದಿಸಿದ್ದಾರೆ. ಇದಲ್ಲದೆ, ಪ್ರತ್ಯರ್ಜಿದಾರರು ಹೆಣ್ಣು ಮಗುವಿನ ಅಭಿರಕ್ಷೆಯನ್ನು ಯಾವ ಸಂದರ್ಭಗಳ ಅಡಿಯಲ್ಲಿ ತೆಗೆದುಕೊಂಡಿರುವರೋ ಆ ಸಂದರ್ಭಗಳನ್ನು ಅರ್ಜಿಯ 12 ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿದೆ ಎಂದು ಸಹ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ತಮ್ಮ ನಿವೇದನೆಗಳ ಸಮರ್ಥನೆಯಲ್ಲಿ, ' ಗಾಯತ್ರಿ ಬಜಾಜ್ -ವಿರುದ್ಧ-ಜಿತೆನ್ ಭಲ್ಲಾ - ಎಐಆರ್ 213 ಎಸ್ಸಿ 102, 4 ಮತ್ತು ' ಅಂದು ಫಿಲಿಪ್ ಅವರ ಮೊಖ್ಯಾರ್ನಾಮೆ ಪಿ.ಟಿ. ಫಿಲಿಪೋಸ್ನಿಂದ ಪ್ರತಿನಿಧಿತ -ವಿರುದ್ಧ-ಸುನೀಲ್ ಜಾಕೋಬ್ - ಎಐಆರ್ 2017 ಎಸ್ಸಿ 1522, ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳನ್ನು ಅವಲಂಬಿಸಿದ್ದಾರೆ.ಇದಲ್ಲದೆ ಅವರು, ಅರ್ಜಿದಾರರ ಹೆಸರಿನಲ್ಲಿ ಮಗುವಿನ ಅಭಿರಕ್ಷೆಯನ್ನು ನಿರ್ದೇಶಿಸಿ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ, ಮಗುವನ್ನು ಆಘಾತಗೊಳಿಸಿದಂತಾಗುವುದೆಂದು ನಿವೇದಿಸಿಕೊಂಡಿದ್ದಾರೆ.

7. ನಾನು ಪರಸ್ಪರ ತದ್ವಿರುದ್ಧದ ನಿವೇದನೆಗಳನ್ನು ಪರಿಗಣಿಸಿದ್ದೇನೆ ಮತ್ತು ದಾಖಲೆಗಳನ್ನು ಅವಲೋಕಿಸಿದ್ದೇನೆ.ಹಾಲ್ಸ್ ಬರಿ ಅವರ ಇಂಗ್ಲೆಂಡ್ನ ಕಾನೂನುಗಳು ಪುಸ್ತಕದ 4 ನೇ ಆವೃತ್ತಿ 24 ನೇ ಸಂಪುಟ, 217 ನೇ ಪುಟದಲ್ಲಿರುವ 511 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

"511. ಯಾವುದೇ ನ್ಯಾಯಾಲಯದ ಮುಂದಿನ ಯಾವುದೇ ವ್ಯವಹರಣೆಗಳಲ್ಲಿ, ಅಪ್ರಾಪ್ತರ ಅಭಿರಕ್ಷೆ ಅಥವಾ ಪೋಷಣೆ ಪ್ರಶ್ನೆಯಲ್ಲಿದ್ದರೆ, ಆಗ, ಆ ಪ್ರಶ್ನೆಯನ್ನು ನಿರ್ಧರಿಸುವಲ್ಲಿ, ನ್ಯಾಯಾಲಯವು ಅಪ್ರಾಪ್ತರ ಕ್ಷೇಮಾಭಿವೃದ್ಧಿಯನ್ನು ಮೊದಲನೆಯದಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು ಮತ್ತು ಅದು ಪರಮೋಚ್ಚ ಪರಿಗಣನೆಯಾಗಿರಬೇಕು, ಹಾಗೂ ಯಾವುದೇ ಚ ಇತರ ದೃಷ್ಟಿಯಿಂದ ಆ ಅಭಿರಕ್ಷೆಯ ಅಥವಾ ಪೋಷಿಸುವ ಸಂಬಂಧದಲ್ಲಿ ತಂದೆಯ ಕ್ಷೇಮು, ತಾಯಿಯ ಕ್ಷೇಮಿಗಿಂತ ಮೇಲ್ಪಟ್ಟದ್ದಾಗಿದೆಯೇ ಅಥವಾ ತಾಯಿಯ ಕ್ಷೇಮು ತಂದೆಯ ಕೇಮಿಗಿಂತ ಮೇಲ್ಪಟ್ಟಿದ್ದಾಗಿದೆಯೇ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು.99

ಅಮೇರಿಕಾದ ನ್ಯಾಯಶಾಸ್ತ್ರದ, 2 ನೇ ಆವೃತ್ತಿ, ಸಂಪುಟ 39, ಕಂಡಿಕೆ 1, ಪುಟ 34 ರಲ್ಲಿ ಈ ಕೆಳಗಿನಂತೆ ಹೇಳಲಾಗಿದೆ:

" ನಿಯಮವಾಗಿ, ಅಪ್ರಾಪ್ತನ ಪಾಲಕರ ಆಯ್ಕೆಯಲ್ಲಿ, ಮಗುವಿನ ಅತ್ಯುತ್ತಮ ಹಿತಾಸಕ್ತಿಯು ಪರಮೋಚ್ಚ ಪರಿಗಣನೆಯಾಗಿರುತ್ತದೆ, ಇದಕ್ಕಾಗಿ ಕೆಲವೊಮ್ಮೆ ತಂದೆ-ತಾಯಿಗಳ ಹಕ್ಕುಗಳನ್ನು ಸಹ ಬಿಟ್ಟುಕೊಡಬೇಕಾಗುತ್ತದೆ."

8. ಮೇಲೆ ಹೇಳಿದ ಗೌರವ್ ನಾಗ್ಪಾಲ್ ಮೊಕದ್ದಮೆಯಲ್ಲಿ ಇಂಗ್ಲೀಷ್ ಕಾನೂನಿನ ಹಾಗೂ ಅಮೇರಿಕಾದ ಕಾನೂನಿನ ಮೇರೆಗೆ ಮಗುವಿನ ಅಭಿರಕ್ಷೆಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಮೇಲೆ ಹೇಳಿದ ತತ್ವಗಳನ್ನು ಚ ಗಮನಕ್ಕೆ ತೆಗೆದುಕೊಂಡಿದೆ ಮತ್ತು ತಂದೆಯ ಹಣಕಾಸು ಸಮೃದ್ಧಿ ಮಾತ್ರವೇ, ತಾಯಿಗೆ ಮಗುವಿನ ಅಭಿರಕ್ಷೆಯನ್ನು ನಿರಾಕರಿಸಲು ಕಾರಣವಾಗುವುದಿಲ್ಲ ಹಾಗೂ ಸೂಕ್ತ ಮೊಕದ್ದಮೆಗಳಲ್ಲಿ, ನಿರ್ವಹಣಾ ವೆಚ್ಚದ ಜೊತೆಗೆ ಶೈಕ್ಷಣಿಕ ವೆಚ್ಚಗಳನ್ನು ನೀಡಲು ತಂದೆಗೆ ನಿರ್ದೇಶನವನ್ನು ನೀಡಬಹುದಾಗಿದೆ ಎಂದು ನಿರ್ಣಯಿಸಿತು. 'ಮೌಸಮಿ ಮೋತ್ರಾ ಗಂಗೂಲಿ ವಿರುದ್ಧ-ಜಯಂತಿ ಗಂಗೂಲಿ ' ಮೊಕದ್ದಮೆಯಲ್ಲಿ, ಅಪ್ರಾಪ್ತ ಮಗುವಿನ ಅಭಿರಕ್ಷೆಯ ಸಂಬಂಧದಲ್ಲಿನ ಕಾನೂನಿನ ತತ್ವಗಳನ್ನು ಸರಿಯಾಗಿಯೇ ಇತ್ಯರ್ಥಗೊಳಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.ಯಾವ ಪಾಲಕರಿಗೆ ಮಗುವಿನ ಪಾಲನೆ ಮತ್ತು ನಿಯಂತ್ರಣವನ್ನು ಒಪ್ಪಿಸಬೇಕು ಎಂಬ ಪ್ರಶ್ನೆಯನ್ನು ನಿರ್ಧರಿಸುವಾಗ, ಮಗುವಿನ ಕ್ಷೇಮಾಭಿವೃದ್ಧಿ ಮತ್ತು ಹಿತಾಸಕ್ತಿಯು ಮೊದಲ ಮತ್ತು ಪರಮೋಚ್ಚ ಪರಿಗಣನೆಯಾಗಬೇಕೇ ಹೊರತು, ಶಾಸನದ ಮೇರೆಗಿನ ತಂದೆ-ತಾಯಿಗಳ ಹಕ್ಕುಗಳಲ್ಲ ಎಂಬುದು ಸರ್ವೇಸಾಮಾನ್ಯವಾದ ಕಾನೂನಾಗಿದೆ. 'ಶ್ಯಾಮರಾವ್ ಮರೋತಿ ಕೊರ್ವಾಟೆ -ವಿರುದ್ಧ-ದೀಪಕ್ ಕಿಸನ್ರಾವ್ ಟೇಕಮ್ ಮೊಕದ್ದಮೆಯಲ್ಲಿ, ಮಗುವಿನ ಅಭಿರಕ್ಷೆಗೆ ಸಂಬಂಧಿಸಿದ ವಿಷಯವನ್ನು ನಿರ್ಧರಿಸುವ ಮಾರ್ಗದರ್ಶಿ ಅಂಶಗಳನ್ನು ಸರ್ವೋಚ್ಚ ನ್ಯಾಯಾಲಯವು ಉಲ್ಲೇಖಿಸಿದೆ.ಮೇಲೆ ಹೇಳಿದ ಗಾಯತ್ರಿ ಬಜಾಜ್ -ವಿರುದ್ಧ-ಜೊತೆನ್ ಭಲ್ಲಾ ' ಮೊಕದ್ದಮೆಯಲ್ಲಿ ಸಹ ಇದೇ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದ್ದು, ತಾಯಿಯ ಸೌಖ್ಯ ಅಥವಾ ಸಹವಾಸವನ್ನು ನೋಡದ ಅಥವಾ ಅನುಭವಿಸದ ಅಥವಾ ಜೀವಿಸದ ಮಗು, ಸಹಜವಾಗಿಯೇ, ಇನ್ನೊಂದು ಕಡೆಯ ಹುಲ್ಲು ಹಚ್ಚಹಸುರಾಗಿದೆ ಎಂದು ಗ್ರಹಿಸುವ ಸ್ಥಿತಿಯಲ್ಲಿರುವುದಿಲ್ಲವೆಂದು ನಿರ್ಣಯಿಸಲಾಯಿತು.ಇದಲ್ಲದೆ, ಹೆಣ್ಣು ಮಗುವನ್ನು ಆಕೆಯ ತಾಯಿಯೊಂದಿಗೆ ವಾಸಿಸುವ ಸನ್ನಿವೇಶಕ್ಕೆ ಒಳಗಾಗಿಸಿದಾಗ ಮಾತ್ರವೇ, ತನ್ನ ತಾಯಿಯೊಂದಿಗಿನ ಸಹವಾಸದಲ್ಲಿ ಆಕೆಯ ಕ್ಷೇಮಾಭಿವೃದ್ಧಿ ಇರುವುದೇ ಅಥವಾ ತನ್ನ ತಂದೆಯ ಸಹವಾಸದಲ್ಲಿ ಇರುವುದೇ ಎಂಬುದನ್ನು ಸೂಕ್ತವಾಗಿ ವಿಶ್ಲೇಷಿಸುವ ಸ್ಥಿತಿಯಲ್ಲಿ ಆಕೆಯು ಇರುವಳು ಎಂದು ನಿರ್ಣಯಿಸಲಾಗಿದೆ.ಇದಲ್ಲದೆ, ಮಗುವಿನ ವ್ಯಕ್ತಿತ್ವ ವಿಕಸನದಲ್ಲಿ ತಾಯಿಯ ಪಾತ್ರವನ್ನು ಎಂದಿಗೂ ಸಂಶಯಿಸಲಾಗುವುದಿಲ್ಲ.ಮೇಲೆ ಹೇಳಿದ ನಿತ್ಯಾ ಆನಂದ್ ರಾಘವನ್ ಮೊಕದ್ದಮೆಯಲ್ಲಿ, ಹೆಣ್ಣು ಮಗುವಿನ ತಾಯಿಯ ಅಭಿರಕ್ಷೆಯಲ್ಲಿ ಇರುವುದು ಆಕೆಗೆ ಹಾನಿಕಾರಕವಾಗುವುದೆಂದು ಸೂಚಿಸುವ ಸಂದರ್ಭಗಳು ಇದ್ದ ಹೊರತು, ಸುಮಾರು 7 ವರ್ಷಗಳ ಒಳಗಿನ ಹೆಣ್ಣು ಮಗುವು ತಾತ್ವಿಕವಾಗಿ ತನ್ನ ತಾಯಿಯ ಅಭಿರಕ್ಷೆಯಲ್ಲಿರಬೇಕು ಎಂದು ನಿರ್ಣಯಿಸಲಾಯಿತು.

9. ಮೇಲೆ ಹೇಳಿದ ಇತ್ಯರ್ಥಗೊಂಡ ಕಾನೂನಿನ ಸ್ಥಾನಮಾನದ ಹಿನ್ನೆಲೆಯಲ್ಲಿ, ಪ್ರಸ್ತುತ ಮೊಕದ್ದಮೆಯ ಸಂಗತಿಗಳನ್ನು ಪರಿಶೀಲಿಸಬಹುದು.ಪ್ರಸ್ತುತ ಮೊಕದ್ದಮೆಯಲ್ಲಿ, ಕೌಟುಂಬಿಕ ನ್ಯಾಯಾಲಯವು ಯಾಂತ್ರಿಕವಾದ ರೀತಿಯಲ್ಲಿ ಆದೇಶವನ್ನು ಹೊರಡಿಸಿದ್ದು, ಅದು ಗಮನ ಹರಿಸದ ದೋಷದಿಂದ ಕೂಡಿದೆ.ಅರ್ಜಿದಾರರ ಅಭಿರಕ್ಷೆಯಿಂದ ಮಗುವನ್ನು ಪ್ರತ್ಯರ್ಜಿದಾರರು ಬಲವಂತವಾಗಿ ಪಡೆದಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಮಾತ್ರ ನಿರ್ಣಯಿಸಿದೆ, ಅದನ್ನು ನಿಯಮಿತ ವಿಚಾರಣೆಯ ನಂತರ ಪರಿಗಣಿಸಬೇಕು ಹಾಗೂ ಈ ಹಂತದಲ್ಲಿ, ತಾಯಿಯು ಅಪ್ರಾಪ್ತ ಮಗುವಿನ ಮಧ್ಯಂತರ ಅಭಿರಕ್ಷೆಗೆ ಹಕ್ಕುಳ್ಳವಳಾಗಿರುವಳೇ ಎಂಬುದನ್ನು ಪರಿಗಣಿಸಬೇಕಾದುದು ಮಾತ್ರ ಅಗತ್ಯದ ವಿಷಯವಾಗಿದೆ.ಇದಲ್ಲದೆ, ನ್ಯಾಯದ ಆಶಯವನ್ನು ಈಡೇರಿಸಲು, ಭೇಟಿಯ ಹಕ್ಕುಗಳನ್ನು ಹಾಗೂ ಬೇಸಿಗೆ, ದಸರಾ ಮತ್ತು ಚಳಿಗಾಲದ ರಜಾ ಅವಧಿಯಲ್ಲಿ ಎರಡನೇ ಅರ್ಧ ಅವಧಿಯಲ್ಲಿ 50% ರಷ್ಟರವರೆಗೆ ಮಧ್ಯಂತರ ಅಭಿರಕ್ಷೆಯನ್ನು ನೀಡುವುದು ನ್ಯಾಯಯುತ ಮತ್ತು ಸೂಕ್ತವೆಂದು ನಿರ್ಧರಿಸಲಾಗಿದೆ.ಪ್ರಶ್ನಿತ ಆದೇಶವು ಸಮಸ್ಯಾತ್ಮಕವಾಗಿರುವುದು ಮಾತ್ರವಲ್ಲದೆ, ಗಮನ ಹರಿಸದಿರುವ ದೋಷದಿಂದ ಸಹ ಕೂಡಿದೆ.ಮಗುವಿನ ಅಭಿರಕ್ಷೆಗೆ ಸಂಬಂಧಿಸಿದ ವಿಷಯವನ್ನು ನಿರ್ಣಯಿಸುವಾಗ, ಮಗುವಿನ ಕ್ಷೇಮಾಭಿವೃದ್ಧಿಯು ಪರಮೋಚ್ಚ ಪರಿಗಣನೆಯಾಗಿರಬೇಕು ಎಂಬ ಅಂಶಕ್ಕೆ ಚ ಸಂಬಂಧಿಸಿದ ವಿಷಯವನ್ನು ನಿರ್ಣಯಿಸುವಾಗ, ಕಾನೂನಿನ ಇತ್ಯರ್ಥಗೊಂಡ ಕಾನೂನಿನ ಸ್ಥಾನಮಾನವನ್ನು ಕೌಟುಂಬಿಕ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಂಡೇ ಇಲ್ಲ. ಮಗು, ಹೆಣ್ಣು ಮಗುವಾಗಿದೆ ಮತ್ತು ಸುಮಾರು 5 ವರ್ಷಗಳ ವಯಸ್ಸಿನ ಮಗುವಾಗಿದೆ.ಆದುದರಿಂದ, ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ದೃಷ್ಟಿಯಿಂದ ಆಕೆಯ ಅಭಿರಕ್ಷೆಯನ್ನು ಆಕೆಯ ತಾಯಿಗೆ ನೀಡಬೇಕಾದ ಅಗತ್ಯವಿದೆ.ಆದಾಗ್ಯೂ, ಮೇಲೆ ಹೇಳಿದ ವಿಷಯಾಂಶವನ್ನು ಕೌಟುಂಬಿಕ ನ್ಯಾಯಾಲಯವು ಪರಿಗಣಿಸಿರುವುದಿಲ್ಲ.ಪ್ರಶ್ನಿತ ಆದೇಶವನ್ನು ಹೊರಡಿಸುವಾಗ, ಮಾನ್ಯ ನ್ಯಾಯಾಧೀಶರು, ಅಪ್ರಾಪ್ತ ಮಗುವಿನ ಅಭಿರಕ್ಷೆಯು ಯಾವಾಗಲೂ ತಾಯಿಯೊಂದಿಗೆ ಇರಬೇಕು ಎಂಬ ಇತ್ಯರ್ಥಗೊಂಡ ಕಾನೂನಿನ

ಸ್ಥಾನಮಾನದಿಂದ ಪಲ್ಲಟಗೊಳ್ಳುವುದನ್ನು ಸಮರ್ಥಿಸಿ ನಿರ್ಬಂಧಪಡಿಸುವ ಸಂದರ್ಭಗಳನ್ನು ಎಲ್ಲಿಯೂ ನಿರೂಪಿಸಿರುವುದಿಲ್ಲ ಎಂಬುದನ್ನು ಗಮನಿಸುವುದು ಪ್ರಸಂಗೋಚಿತವಾದುದಾಗಿದೆ.ತಂದೆಗೆ ಹೆಣ್ಣು ಮಗುವಿನ ಅಭಿರಕ್ಷೆಯನ್ನು ನಿರ್ದೇಶಿಸುವಾಗ ಯಾವುದೇ ನಿರ್ಬಂಧಕ ಸಂದರ್ಭಗಳನ್ನು ಸಹ ನಿರೂಪಿಸಿರುವುದಿಲ್ಲ.ಸಾಮಾನ್ಯವಾಗಿ, ಈ ನ್ಯಾಯಾಲಯವು, ಕಾನೂನಿಗೆ ಅನುಸಾರವಾಗಿ ನಿರ್ಣಯ ತೆಗೆದುಕೊಳ್ಳಲು ಹೊಸದಾಗಿ ಕೌಟುಂಬಿಕ ನ್ಯಾಯಾಲಯಕ್ಕೆ ವಿಷಯವನ್ನು ಕಳುಹಿಸುತ್ತದೆ.ಆದಾಗ್ಯೂ, ಮೊಕದ್ದಮೆಯ ವಿಶಿಷ್ಟ ಸಂಗತಿಯ ಸಂದರ್ಭದಲ್ಲಿ, ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮವನ್ನು ಕೌಟುಂಬಿಕ ನ್ಯಾಯಾಲಯವು ಚ ಪರಿಗಣನೆಗೆ ತೆಗೆದುಕೊಳ್ಳದೆ ಇರವುದರಿಂದ, ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಆದೇಶವು ಅಜಾಗರೂಕತೆಯಿಂದ ಕೂಡಿದೆ.ಆದುದರಿಂದ, ಪ್ರಶ್ನಿತ ಆದೇಶವು ಅಧಿಕಾರವ್ಯಾಪ್ತಿಯ ಅನಿಶ್ಚಿತತೆಯಿಂದ ಅಷ್ಟೇ ಅಲ್ಲದೆ ದಾಖಲೆಯ ಮೇಲಿಂದಲೇ ಸ್ಪಷ್ಟವಾಗುವ ತಪ್ಪಿನಿಂದ ಸಹ ಕೂಡಿದೆ.ಆದುದರಿಂದ, ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ ಮತ್ತು ತಳ್ಳಿ ಹಾಕಲಾಗಿದೆ ಹಾಗೂ ಮಗುವಿನ ತಾಯಿಯಾಗಿರುವ ಅರ್ಜಿದಾರರಿಗೆ ಹೆಣ್ಣು ಮಗುವಿನ ಅಭಿರಕ್ಷೆಯನ್ನು ಹಸ್ತಾಂತರಿಸಲು ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲಾಗಿದೆ.

ತದನುಸಾರವಾಗಿ, ಅರ್ಜಿಗಳನ್ನು ವಿಲೆ ಮಾಡಲಾಗಿದೆ.